## ಷೆಡ್ಯೂಲ್- IV

## ಮುಂಬಡ್ತಿ ಕಾರ್ಯವಿಧಾನ

1. ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ಯಾವುದೇ ವರ್ಗದ ಹುದ್ದೆಯಲ್ಲಿ ಮಂಜೂರಾದ ವೃಂದಬಲದಲ್ಲಿ ಹಾಗೂ ಮುಂಬಡ್ತಿ ಕೋಟಾದಲ್ಲಿ ಉದ್ಭವಿಸಿದ ಖಾಲಿ ಹುದ್ದೆಗೆ/ಹುದ್ದೆಗಳಿದ್ದಲ್ಲಿ ಮಾತ್ರ ಮುಂಬಡ್ತಿ ನೀಡಬೇಕು.
2. ಮುಂಬಡ್ತಿ ಕೋಟಾದ ಹುದ್ದೆ ಖಾಲಿಯಿಲ್ಲದೇ ಕೇವಲ ಅರ್ಹತಾ ಷರತ್ತುಗಳನ್ನು ಪೂರೈಸಿದ್ದಾರೆಂಬ ಕಾರಣದಿಂದ ಮುಂಬಡ್ತಿ ನೀಡಬಾರದು.
3. ಪೋಷಕ ವೃಂದದಲ್ಲಿ (Feeder cadre) ನಿಗದಿಪಡಿಸಿದ ಅರ್ಹತಾದಾಯಕ ಸೇವೆಯನ್ನು ಪೂರೈಸಿದ ಮಾತ್ರಕ್ಕೆ ಯಾವುದೇ ನೌಕರರು ಮೇಲಿನ ಹುದ್ದೆಗೆ ಮುಂಬಡ್ತಿ ನೀಡುವಂತೆ ಕ್ಲೇಮು ಮಾಡಲು ಅರ್ಹತೆ ಪಡೆಯುವುದಿಲ್ಲ (ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್‌ನಲ್ಲಿ ಒಳಗೊಂಡಿರುವ ಸಿಬ್ಬಂದಿ ಹೊರತುಪಡಿಸಿ).
4. ಮುಂಬಡ್ತಿಗೆ ಅರ್ಹತಾದಾಯಕ ಸೇವೆ ಪೂರೈಸುವುದರ ಜೊತೆಗೆ ಇತರೆ ಅರ್ಹತಾ ಷರತ್ತುಗಳಾದ ಮೆರಿಟ್ ಅಂದರೆ, ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ನಮೂದಾಗಿರುವ ಕಾರ್ಯದಕ್ಷತೆಯನ್ನು ಪರಿಗಣಿಸತಕ್ಕದ್ದು.
5. ರಾಜ್ಯ ಒಕ್ಕಲಿಗರ ಸಂಘದ ಆಧೀನ ಸಂಸ್ಥೆಗಳಲ್ಲಿ ಸಂಬಂಧಪಟ್ಟ ವೃಂದಗಳಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರ ಮುಂಬಡ್ತಿಗೆ ಅರ್ಹತಾದಾಯಕ ಸೇವೆಯನ್ನಾಗಿ ಪರಿಗಣಿಸತಕ್ಕದ್ದು.
6. ಮುಂಬಡ್ತಿಗೆ ನೌಕರರ ಜೇಷ್ಠತೆಯನ್ನು ಯಾವುದೇ ವೃಂದದಲ್ಲಿ ನಿರಂತರ ಸ್ಥಾನಪನ್ನಾವಧಿ ಒಳಗೊಂಡಂತೆ ಸಲ್ಲಿಸಿರುವ ಸೇವಾವಧಿಯನ್ನು ಆಧರಿಸಿ ನಿರ್ಧರಿಸತಕ್ಕದ್ದು. ಸಂಸ್ಥೆಯ ಸೇವೆಯಲ್ಲಿದ್ದು ಯಾವುದೇ ಕಾರಣಗಳಿಗಾಗಿ ಸೇವೆಯಿಂದ ವಿಮುಕ್ತಿಗೊಂಡು ನಂತರ ಸೇವೆಗೆ ಪುನರ್ ನೇಮಕಗೊಂಡು ಮುಂದುವರೆಯುವ ನೌಕರರ ಹಿಂದಿನ ಸೇವಾವಧಿಯನ್ನು(ಇತರೆ ಸಂಸ್ಥೆಯಲ್ಲಿ ಸಲ್ಲಿಸಿರುವ ಸೇವೆ ಒಳಗೊಂಡಂತೆ) ಜೇಷ್ಠತೆಗೆ ಪರಿಗಣಿಸುವಂತಿಲ್ಲ. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಕೋಟಾದಡಿ ಖಾಲಿ ಹುದ್ದೆಗಳನ್ನು ತುಂಬಿದಾಗ ನೇರ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ಮೆರಿಟ್ ಆಧಾರದ ಆಯ್ಕೆ ಕ್ರಮಾಂಕದಂತೆ ನಿರ್ಧರಿಸತಕ್ಕದ್ದು.
7. ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಪ್ರತಿಕೂಲ ಷರಾಗಳಿದ್ದಲ್ಲಿ, ಅಮಾನತ್ತುಗೊಂಡಿದ್ದಲ್ಲಿ, ಇಲಾಖಾ ವಿಚಾರಣೆ/ನ್ಯಾಯಾಂಗ ವಿಚಾರಣೆ ಬಾಕಿ ಇದ್ದಲ್ಲಿ ಅಂತಹ ನೌಕರರನ್ನು ದೋಷಮುಕ್ತರಾಗುವವರೆಗೆ ಮುಂಬಡ್ತಿಗೆ ಅರ್ಹರೆಂದು ಪರಿಗಣಿಸುವಂತಿಲ್ಲ.

**ಮುಂಬಡ್ತಿ ಸಮಿತಿ:**

ನೌಕರರು ಮುಂಬಡ್ತಿಗೆ ಅರ್ಹರಿರುವುದನ್ನು ಪರಿಗಣಿಸಲು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ಒಂದು ಮುಂಬಡ್ತಿ ಸಮಿತಿಯನ್ನು ನಿಗದಿಪಡಿಸಿದೆ.

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರು. | ಸದಸ್ಯರು |
| (ಇ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ,ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಇ) | ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸಂಚಾಲಕರು |

**ಕೋರಂ:** ಮುಂಬಡ್ತಿ ಸಮಿತಿ ಸಭೆಗೆ ಮೇಲೆ ತಿಳಿಸಿರುವ ಎಲ್ಲಾ ಸದಸ್ಯರ ಹಾಜರಾತಿ ಕೋರಂ ಆಗಿರತಕ್ಕದ್ದು.

ಮುಂಬಡ್ತಿ ಸಮಿತಿಯು ವರ್ಷದಲ್ಲಿ ಕನಿಷ್ಠ ಒಂದು ಬಾರಿ ಸಭೆ ಸೇರಿ ಮುಂಬಡ್ತಿ ಕೋಟಾದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ವಿವರಗಳನ್ನು ಪರಿಶೀಲಿಸಿ, ಆ ಹುದ್ದೆಗಳಿಗೆ ಅರ್ಹ ನೌಕರರುಗಳಿಗೆ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡುವುದು.

(ಬಿ.ಸಿದ್ದಯ್ಯ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.